ಅಲೆಮಾರಿಯ ಅಂಡಮಾನ್ ಮತ್ತು ವರ್ತಮಾನದ ಮುಖಾಮುಖಿ

ರಘುನಂದನ್ ಬಿ.ಆರ್.

ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ, ಬೆಂಗಳೂರು.

DOI: https://doi.org/10.5281/zenodo.18816720

ABSTRACT:

ಪೂರ್ಣಚಂದ್ರ ತೇಜಸ್ವಿಯವರ 'ಅಲೆಮಾರಿಯ ಅಂಡಮಾನ್ ಮತ್ತು ಮಹಾನದಿ ನೈಲ್' ಕೃತಿಯು ಕೇವಲ ಸಾಂಪ್ರದಾಯಿಕ ಪ್ರವಾಸ ಕಥನವಾಗಿರದೆ, ಅಂಡಮಾನಿನ ಭೌಗೋಳಿಕ, ಸಾಮಾಜಿಕ ಮತ್ತು ರಾಜಕೀಯ ವಾಸ್ತವಗಳ ತೀಕ್ಷ್ಣ ವಿಶ್ಲೇಷಣೆಯಾಗಿದೆ. ಪ್ರವಾಸಿ ತಾಣಗಳ ವರ್ಣನೆಗಿಂತ ಹೆಚ್ಚಾಗಿ, ಹಡಗುಯಾನದ ಏಕತಾನತೆ, ಸಹಪ್ರಯಾಣಿಕರ ಮನಸ್ಥಿತಿ ಹಾಗೂ ಭಾರತೀಯ ಸಮಾಜದ ಭ್ರಷ್ಟಾಚಾರ, ಬಡತನದಂತಹ ಜಾಡ್ಯಗಳನ್ನು ಲೇಖಕರು ಇಲ್ಲಿ ಮುಖಾಮುಖಿಯಾಗಿಸಿದ್ದಾರೆ. ಝರವಾ ಬುಡಕಟ್ಟು ಜನರ ಮೇಲಿನ ಆಧುನಿಕತೆಯ ದೌರ್ಜನ್ಯ, ವಂಡೂರಿನ ಹವಳದ ದಂಡೆಗಳ ಜೈವಿಕ ವಿಸ್ಮಯ ಹಾಗೂ ಅಂಡಮಾನಿನ ಅನನ್ಯ ಜಾತ್ಯತೀತ ವಾತಾವರಣವನ್ನು ವೈಜ್ಞಾನಿಕ ಮತ್ತು ಮಾನವೀಯ ಕಾಳಜಿಯೊಂದಿಗೆ ಕಟ್ಟಿಕೊಡಲಾಗಿದೆ. ಅಭಿವೃದ್ಧಿಯ ಹೆಸರಿನಲ್ಲಿ ಪ್ರಕೃತಿಯನ್ನು ನಾಶಮಾಡುತ್ತಿರುವ ವರ್ತಮಾನದ ಬಿಕ್ಕಟ್ಟುಗಳಿಗೆ ಈ ಕೃತಿಯು ಇಂದಿಗೂ ಹೇಗೆ ಪ್ರಸ್ತುತವಾಗಿದೆ ಎಂಬುದನ್ನು ಲೇಖನದಲ್ಲಿ ಚರ್ಚಿಸಲಾಗಿದೆ.

KEYWORDS:

ಅಲೆಮಾರಿಯ ಅಂಡಮಾನ್, ಪೂರ್ಣಚಂದ್ರ ತೇಜಸ್ವಿ, ಪ್ರವಾಸ ಕಥನ, ಪರಿಸರ ಕಾಳಜಿ, ಬುಡಕಟ್ಟು ಸಂಸ್ಕೃತಿ.

ಕನ್ನಡದಲ್ಲಿ ಪ್ರವಾಸ ಕಥನಗಳಿಗೆ ಸಂಬಂಧಪಟ್ಟಂತೆ ಮಾತನಾಡುವುದಾದರೆ ಬಹುತೇಕ ಒಂದೇ ಬಗೆಯ ಸಾಂಪ್ರದಾಯಿಕ ಮಾದರಿಯನ್ನು ಅನುಸರಿಸಿ ಲೇಖಕರು ಬರೆದಿರುವುದನ್ನು ಗಮನಿಸಬಹುದು. ಭೌಗೋಳಿಕ ಪರಿಸರ, ಸಂಸ್ಕೃತಿ, ಆಹಾರ ಪದ್ಧತಿ, ವೇಷಭೂಷಣ, ಪ್ರವಾಸ ತಾಣಗಳು ಮತ್ತು ಇನ್ನಿತರ ವೈಯಕ್ತಿಕ ಅನುಭವಗಳನ್ನು ಸೇರಿಸಿ ವರದಿ ಮಾಡುವುದು ಪ್ರವಾಸ ಕಥನಗಳ ರಚನೆಗೆ ಸಂಬಂಧಿಸಿದ ರೂಢಿಗತವಾದ ಕ್ರಮ. ಪ್ರವಾಸಿಗೊಬ್ಬನ ಪರ್ಸನಲ್ ಟೂರ್ ಡೈರಿಗಳಂತೆಯೂ ಪ್ರವಾಸ ಕಥನಗಳು ಕನ್ನಡದಲ್ಲಿ ರಚನೆಯಾಗಿವೆ. ಇದಲ್ಲದೆ ವಿಷಯ ಕೇಂದ್ರಿತವಾಗಿ ಅಂದರೆ ಐತಿಹಾಸಿಕ, ಧಾರ್ಮಿಕ, ಬುಡಕಟ್ಟು, ಸಾಮಾಜಿಕ ಸಂಕಥನಗಳನ್ನು ಬಿಂಬಿಸುವ ಪ್ರವಾಸಕಥನಗಳು ಕನ್ನಡದಲ್ಲಿ ಬಂದಿವೆ. ಪ್ರವಾಸಿಗನೊಬ್ಬನು ಈಗಾಗಲೇ ಸಿದ್ಧ ಪ್ರಸಿದ್ಧವಾಗಿರುವ ಪ್ರೇಕ್ಷಣೀಯ ತಾಣಗಳಿಗೆ

ಭೇಟಿಕೊಟ್ಟು ಅವುಗಳನ್ನು ವರ್ಣನಾತ್ಮಕವಾಗಿ ಕಣ್ಣಿಗೆ ಕಟ್ಟುವಂತೆ ವಿವರವಾಗಿ ಸ್ಥಳಾವಲೋಕನ ಮಾಡಿ ಬರೆದ ಬರಹಗಳಿಗೂ ಕನ್ನಡದಲ್ಲಿ ಕೊರತೆಯಿಲ್ಲ. ಇದಲ್ಲದೆ ಅಧ್ಯಯನದ ಸಲುವಾಗಿ ಕ್ಷೇತ್ರಕಾರ್ಯಗಳನ್ನು ಮಾಡಿ ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ ಅಲ್ಲದೆ ರಾಜಕೀಯ ಅಧ್ಯಯನಗಳಂತೆಯೂ ಕನ್ನಡದಲ್ಲಿ ಪ್ರವಾಸ ಕಥನಗಳು ಮನ್ನಣೆಯನ್ನು ಪಡೆದಿವೆ. ಈ ಎಲ್ಲಾ ಹಿನ್ನೆಲೆಯಲ್ಲೂ ಪೂರ್ಣಚಂದ್ರ ತೇಜಸ್ವಿಯವರ 'ಅಲೆಮಾರಿಯ ಅಂಡಮಾನ್' ಪ್ರವಾಸ ಕಥನವು ಹಲವು ಕಾರಣಗಳಿಗೆ ವಿಶಿಷ್ಟವೂ ಮತ್ತು ಅನನ್ಯವೂ ಆಗಿದೆ.

ಈ ಮೊದಲೇ ಪ್ರಸ್ತಾಪಿಸಿದಂತೆ ಪ್ರವಾಸದ ಅನುಭವಗಳನ್ನು ದಾಖಲಿಸುವಾಗ ಕೆಲವು ಅಪಾಯಗಳಿರುತ್ತವೆ. ಅವುಗಳಲ್ಲಿ ಬಹಳ ಮುಖ್ಯವಾಗಿ ಬರಹ ವರದಿಯ ರೂಪವನ್ನು ಹೊಂದಿ ವಿವರಣಾತ್ಮಕ ಅಥವಾ ವರ್ಣನಾತ್ಮಕ ನೆಲೆಯಲ್ಲಿ ಪ್ರಕಟಗೊಳ್ಳುತ್ತವೆ. ಇಲ್ಲವೇ ಲೇಖಕನಿಗೆ ದಕ್ಕಿದ ಅನುಭವವೇ ಓದುಗನಿಗೂ ದಕ್ಕಬೇಕು ಎಂಬ ಒತ್ತಾಯವನ್ನು ಕೃತಿ ಹೇರುತ್ತಿರುತ್ತದೆ. ಈ ನೆಲೆಗಳಿಗಿಂತ ಭಿನ್ನವಾದ ಅನುಭವ ತೇಜಸ್ವಿಯವರ 'ಅಲೆಮಾರಿಯ ಅಂಡಮಾನ್' ಪ್ರವಾಸ ಕಥನ ಓದುಗನಿಗೆ ವಿಶಿಷ್ಟ ರೀತಿಯ ಅನುಭವವನ್ನು ಕಟ್ಟಿಕೊಡುತ್ತದೆ. ಯಾವ ಕಾಲದಲ್ಲಿ ತೇಜಸ್ವಿಯವರ ಪ್ರವಾಸ ಕಥನ ಓದಿದರೂ ವರ್ತಮಾನವಾಗಬಲ್ಲ ವಿಶಿಷ್ಟ ಸೃಜನಶೀಲ ರಚನೆ 'ಅಲೆಮಾರಿಯ ಅಂಡಮಾನ್' ಕೃತಿಯಾಗಿದೆ. ಬರಹಕ್ಕೆ ಓದಿಸಿಕೊಳ್ಳುವ ಗುಣ, ಓದಿದ್ದು ಮನನವಾಗುವ ಸಾಧ್ಯತೆ ಹಾಗೂ ಮನನವಾದದ್ದು ಸೃಜನಶೀಲತೆಗಿರುವ ಬಹುಮುಖಿ ಆಯಾಮಗಳನ್ನು ಒದಗಿಸಿ ಕೊಡಬಲ್ಲ ಆಪ್ತ, ಸರಳ ಮತ್ತು ಉತ್ಸಾಹಿ ಬರವಣಿಗೆಯುಳ್ಳ ಕೃತಿ ತೇಜಸ್ವಿಯವರ ಅಂಡಮಾನಿನ ಪ್ರವಾಸ ಕಥನವಾಗಿದೆ. ತೇಜಸ್ವಿ ಅವರ ಪ್ರವಾಸ ಕಥನದ ಮತ್ತೊಂದು ಮುಖ್ಯ ಲಕ್ಷಣವೆಂದರೆ ಅನುಭವಗಳನ್ನು ಹುಡುಕುತ್ತಾ, ಆ ಅನುಭವಗಳಿಂದಲೇ ಸಾಮಾಜಿಕ ಮತ್ತು ವೈಜ್ಞಾನಿಕ ಸತ್ಯಗಳನ್ನು ಬರೆಯುವ ವಿಶಿಷ್ಟ ಶೈಲಿಯ ಕೃತಿ ಕನ್ನಡಿಗರ ಮನೆ ಮನ ತಲುಪಿದೆ. ತೇಜಸ್ವಿಯವರು ಅಲೆಮಾರಿಯ ಅಂಡಮಾನ್ ಪ್ರವಾಸ ಕಥನವನ್ನು ಒಟ್ಟು ಹದಿನೈದು ಶೀರ್ಷಿಕೆಗಳಡಿ ರಚಿಸಿದ್ದಾರೆ. ಪ್ರತಿಯೊಂದು ಲೇಖನಕ್ಕೂ ಪ್ರತ್ಯೇಕವಾದ ಅಸ್ಮಿತೆಯಿದ್ದೂ ಎಲ್ಲವನ್ನೂ ಒಟ್ಟುಗೂಡಿಸಿ ಓದಿದರೂ ಸಮಗ್ರ ಪರಿಕಲ್ಪನೆಯೊಂದು ಮೂಡಬಹುದಾದ ಶಕ್ತಿಯುತ ಬರಹ ತೇಜಸ್ವಿಯವರ ಪ್ರವಾಸ ಕಥನದ್ದಾಗಿದೆ.

ಪ್ರವಾಸದ ಬಗೆಗೆ ತೇಜಸ್ವಿಯವರ ನಿಲುವು, ವಿಮಾನಯಾನದ ಅನುಭವ ಪ್ರವಾಸಕ್ಕೆ ಹೊರಡುವ ತಯಾರಿಗಳು ಮತ್ತು ಪ್ರವಾಸಕ್ಕೆ ಹೊರಟ ಹಿನ್ನೆಲೆಯಲ್ಲಿ ತನ್ನ ಸ್ನೇಹಿತರ ಮನಸ್ಥಿತಿಯನ್ನು ತುಂಬಾ ಲವಲವಿಕೆಯಿಂದ ಲೇಖಕರು ಮೊದಲಭಾಗದಲ್ಲಿ ವಿವರಿಸುತ್ತಾರೆ. ಪ್ರವಾಸಗಳಿಗೆ ಉದ್ದೇಶವಿರುವುದಿಲ್ಲ ಎಂಬ ಅಭಿಮತವನ್ನು ತೋರುತ್ತಲೇ ತೇಜಸ್ವಿಯವರು ಅಂಡಮಾನಿನ ಕೃತಿ ರಚನೆಯ ಮೂಲಕ ಸಾರ್ಥಕ ಉದ್ದೇಶಗಳನ್ನು ನಿರೂಪಿಸುತ್ತಾರೆ. "ಕ್ಯಾಲೆಂಡರುಗಳಲ್ಲಿ, ಸಿನಿಮಾಗಳಲ್ಲಿ ಆಗಲೇ ಪ್ರಕಟಗೊಂಡು ಕ್ಲೀಷೆಗಳಾಗಿರುವ ಪ್ರವಾಸಿ ಪ್ರಸಿದ್ಧ ಕ್ಷೇತ್ರಗಳನ್ನು ನೋಡಲು ನನಗೆ ಕೊಂಚವೂ ಉತ್ಸಾಹವಿಲ್ಲ. ಹಾಗಾಗಿ ತಾಜಮಹಲ್, ಕುತುಬ್ ಮಿನಾರ್, ಆಗ್ರಾ

ಇಲ್ಲಿಗೆಲ್ಲಾ ಹೋದಾಗ ಬೇಸರದಿಂದ ನಾನು ಗೆಳೆಯರಿಗೆ ದಯವಿಟ್ಟು ನೀವೇ ಒಳಗೆ ಹೋಗಿ ನೋಡಿ ಬನ್ನಿ, ನಾನು ಹೊರಗೇ ಕುಳಿತಿರುತ್ತೇನೆ ಎಂದು ಉಳಿದಿದ್ದೆ. ಯಾರಿಗೆ ತಾವಿರುವಲ್ಲೇ ಸಂತೋಷ ಉತ್ಸಾಹ ಕುತೂಹಲಗಳಿರುವುದಿಲ್ಲವೋ ಅವರು ಅದನ್ನು ಹುಡುಕಿಕೊಂಡು ಎಲ್ಲಿಗೆ ಪ್ರವಾಸ ಹೋಗುವುದೂ ವ್ಯರ್ಥ. ಆದ್ದರಿಂದ ನಾನು ಅಂಡಮಾನಿಗೆ ಹೋದುದಕ್ಕೂ ಹೋಗದಿದ್ದುದಕ್ಕೂ ಹೆಚ್ಚು ವ್ಯತ್ಯಾಸ ಕಾಣಲಿಲ್ಲ.'' ಹೀಗೆ ಪ್ರವಾಸದ ಅಗತ್ಯತೆ, ಅನಗತ್ಯತೆ, ಪ್ರವಾಸವನ್ನು ನೋಡಬೇಕಾದ ಬಗೆಯನ್ನು ತೇಜಸ್ವಿಯವರು ಅತ್ಯಂತ ಸ್ಪಷ್ಟವಾಗಿ ಕೃತಿಯ ಆರಂಭದಲ್ಲೇ ತಿಳಿಸಿ ಬಿಡುತ್ತಾರೆ. ಪರಿಚಿತ, ಚಿರಪರಿಚಿತ ಮತ್ತು ಅಪರಿಚಿತಗಳನ್ನು ಗ್ರಹಿಸಬೇಕಾದ ನೆಲೆಗಟ್ಟೊಂದನ್ನು ತೇಜಸ್ವಿಯವರು ಕಂಡುಕೊಂಡ ಬಗೆ ಕೃತಿಯ ಪ್ರವೇಶಕ್ಕೆ ಬೇಕಾದ ಹಲವು ಆಯಾಮಗಳನ್ನು ನಿಖರವಾಗಿ ಸೃಷ್ಟೀಕರಿಸುತ್ತವೆ. ಪುಣ್ಯಕ್ಷೇತ್ರ, ಚಾರಿತ್ರಿಕ ಸ್ಥಳ, ಪ್ರವಾಸಿಧಾಮ ಹಾಗೂ ತೀರ್ಥಕ್ಷೇತ್ರದ ಪ್ರವಾಸಗಳ ಮಿತಿಗಳನ್ನು ಬರೆಯುತ್ತಲೇ ತನಗೆ ಅಗತ್ಯವಾದ ಪ್ರವಾಸವನ್ನು ಆಯ್ಕೆ ಮಾಡಿಕೊಳ್ಳಲು ಬೇಕಾದ ಮನಸ್ಥಿತಿಯನ್ನು ಲೇಖಕರು ತಿಳಿಸುತ್ತಾರೆ. ಅಲ್ಲದೇ ಧರ್ಮ ಕೇಂದ್ರಿತವಾದ ಪ್ರವಾಸಿ ತಾಣಗಳು, ಸರ್ಕಾರಗಳು ಅಭಿವೃದ್ಧಿ ಪಡಿಸಿದ ಪ್ರವಾಸೋದ್ಯಮ ತಾಣಗಳಲ್ಲಿ ನಡೆಯುವ ಅವ್ಯವಹಾರಗಳು, ರಾಜಕೀಯ ಪುಡಾರಿಗಳ ಲೋಲುಪತೆ ಮುಂತಾದ ಅಂಶಗಳನ್ನು ಲೇಖಕರು ಸಕಾಲಕ್ಕೂ ಸಲ್ಲುವಂತೆ ಬರೆಯುತ್ತಾರೆ. ಇದೆಲ್ಲದರ ನಡುವೆ ತಮ್ಮ ಗೆಳೆಯರೊಂದಿಗೆ ಅಂಡಮಾನಿಗೆ ಪ್ರವಾಸ ಹೊರಟ ಸಂದರ್ಭವನ್ನು ಲೇಖಕರು ಅಂಡಮಾನಿನ ಕನಸುಗಳಲ್ಲಿ ಅತ್ಯಂತ ನವಿರಾಗಿ ನಿರೂಪಿಸುತ್ತಾರೆ.

ನಾನ್ ಕೌರಿ ಹಡಗಿನ ಬಗ್ಗೆ ಮತ್ತು ಅವರು ಅದರಲ್ಲಿ ಪ್ರಯಾಣಿಸಿದ ಅನುಭವದ ಬಗ್ಗೆ ಬರೆದಿರುವ ವಿವರಗಳು ಅತ್ಯಂತ ರೋಚಕವೂ ಮತ್ತು ಕುತೂಹಲವನ್ನು ಉಂಟು ಮಾಡುತ್ತದೆ. ಹಾಗೂ ಭಾರತೀಯ ಸಮಾಜದ ಚಿತ್ರಣಗಳನ್ನು ನಮ್ಮ ಮುಂದಿಡುತ್ತವೆ. ಗಂಟೆಗೆ ಕೇವಲ ಹದಿನೈದು ಕಿಲೋಮೀಟರ್ ವೇಗದಲ್ಲಿ ಅಂದರೆ ನೆಲದ ಮೇಲೆ ಸೈಕಲ್ ಚಲಿಸುವಷ್ಟು ಮಾತ್ರ ಚಲಿಸುವ ಹಡಗುಗಳಲ್ಲಿ ಪ್ರಯಾಣ ಅತ್ಯಂತ ಬೇಸರವನ್ನು ತರಿಸುತ್ತದೆ. ಹರಟೆ ಕೊಚ್ಚಲು ಸ್ನೇಹಿತರಿಲ್ಲದ್ದರೆ ಹಡಗುಯಾನ ಅತ್ಯಂತ ಹಿಂಸಾದಾಯಕವಾದ ಪ್ರಯಾಣ ಎಂದು ಲೇಖಕರು ಬರೆಯುತ್ತಾರೆ. ಅಷ್ಟೇ ಅಲ್ಲದೆ ತೇಜಸ್ವಿಯವರು ಬಂಗಾಳಕೊಲ್ಲಿಯಲ್ಲಿ ಚಂಡಮಾರುತಗಳಿಲ್ಲದೆ ಶಾಂತವಾಗಿದ್ದ ಹಡಗು ಪ್ರಯಾಣಕ್ಕಿರುವ ಬೇರೆ ಬೇರೆ ಆಯಾಮಗಳನ್ನೂ ಕೂಡ ಕಟ್ಟಿಕೊಡುತ್ತಾರೆ. ಹಡಗುಯಾನ ಸಂದರ್ಭದಲ್ಲಿ ತೇಜಸ್ವಿಯವರ ಗೆಳೆಯ ಚಂದ್ರು ಭಾರತವನ್ನು ಕುರಿತು ''ಈ ದೇಶವನ್ನು ಒಂದು ಸಾರಿಯಾದರೂ ನಮ್ಮ ಜೀವಿತದಲ್ಲಿ ಬಿಟ್ಟು ಹೋಗುತ್ತಿದ್ದೇವಲ್ಲಾ'' ಎಂಬ ಮಾತಿಗೆ ತೇಜಸ್ವಿಯವರ ಪ್ರತಿಕ್ರಿಯೆ ನಿಜಕ್ಕೂ ಭಾರತದ ಚಿಂತಾಜನಕ ಸ್ಥಿತಿಯನ್ನು ವಿವರಿಸುತ್ತಲೇ ಒಂದಷ್ಟು ದಿನಗಳ ಕಾಲ ಭ್ರಷ್ಟಾಚಾರ, ಬಡತನ, ಪರಿಸರ ನಾಶ, ರಾಜಕಾರಣಿಗಳ ಲಂಪಟತನ ಎಂಬೆಲ್ಲಾ ಶನಿಗಳನ್ನು ಬಿಟ್ಟು ದೂರ ಹೋಗಬಹುದು ಎಂಬ ನಿಲುವು ಎಲ್ಲಾ ಕಾಲದ ಭಾರತೀಯ ಸಮಾಜ, ರಾಜಕೀಯ ಮತ್ತು ಆರ್ಥಿಕ ಸ್ಥಿತಿಗಳನ್ನು

ವಿವರಿಸುವಂತಿತ್ತು. ನಾನ್ ಕೌರಿ ಹಡಗಿನ ಬಚ್ಚಲುಮನೆಗಳಲ್ಲಿದ್ದ ಹಿತ್ತಾಳೆ ನಲ್ಲಿಗಳನ್ನು, ತಂಬಿಗೆಗಳನ್ನು ಮತ್ತು ಷವರ್ ಬಾತ್ ಸಲಕರಣೆಗಳನ್ನು ಪ್ರಯಾಣಿಕರು ಕದ್ದೊಯ್ದಿದ್ದರು. ಕದಿಯಲಾರದ ವಸ್ತುಗಳನ್ನು ವಿರೂಪಗೊಳಿಸಿದ್ದರು. ಮುಂದುವರೆದಂತೆ ತೇಜಸ್ವಿಯವರು ಸಾಮಾನ್ಯ ಜನರು ಪ್ರಯಾಣಿಸುವ ಬಂಕರ್ ವರ್ಗವನ್ನು ನೋಡಿಬರಲು ಹೋದಾಗ ಅಲ್ಲಿ ಜುಟ್ಟು ಹಿಡಿದುಕೊಂಡು ನಡೆಯುತ್ತಿದ್ದ ಜಗಳ, ನರಕಸದೃಶವಾದ ಶೌಚಗೃಹಗಳಲ್ಲಿ ಪಾಯಖಾನೆಯ ರಾಶಿ, ಗಲೀಜು ಇವುಗಳೆಲ್ಲವನ್ನೂ ನೋಡಿ ಭಾರತದ ಪರಿಸ್ಥಿತಿಯನ್ನು ಹಾಗೂ ಆದರ್ಶವಾದ, ಸಮಾಜವಾದ ಮುಂತಾದ ಪರಿಭಾಷೆಗಳನ್ನು ವ್ಯಾಖ್ಯಾನಿಸಲು ಬೇಕಾದ ಪರಿಕರಗಳಂತೆ ಅವರಿಗೆ ಕಂಡುಬಂದವು. ಬಂಕರ್ ವರ್ಗದ ಚಿತ್ರಣವನ್ನು ನೋಡಿದ ತೇಜಸ್ವಿಯವರು "ಮಾರ್ಕ್ಸ್ ಬಡತನ ಕೇಂದ್ರೀಕರಣವಾಗುತ್ತಾ ಹೋದಂತೆಲ್ಲಾ ತಮ್ಮ ಸಮಾನ ಸಮಸ್ಯೆಗಳ ಮುಖಾಂತರ ಬಡವರ ಸಮುದಾಯದಲ್ಲಿ ಭ್ರಾತೃತ್ವ ಮೂಡುತ್ತದೆ; ಅವರೆಲ್ಲಾ ಬಂಡವಾಳಶಾಹಿಯ ವಿರುದ್ಧ ಹೋರಾಡುವುದಕ್ಕೆ ಒಗ್ಗಟ್ಟಾಗುತ್ತಾ ಹೋಗುತ್ತಾರೆ ಎಂದು ಬಂಡವಾಳಶಾಹಿ ವಿಕಾಸದ ಒಂದು ಮುಖ್ಯ ನಿಯಮವನ್ನು ಹೇಳಿದ. ಆದರೆ ಮಾರ್ಕ್ಸ್‌ನ ಅನಂತರ ಮುಂದುವರಿದ ಚರಿತ್ರೆ ಬೇರೆಯದೇ ಕಥೆ ಹೇಳುತ್ತದೆ. ಬಡವರು ಬಡವರಾದಂತೆಲ್ಲಾ ದುರಾಸೆಯುಳ್ಳವರೂ ಸ್ವಾರ್ಥಕ್ಕಾಗಿ ತಮ್ಮ ಸಹಬಾಂಧವರಿಗೆ ಸುಲಭ ದ್ರೋಹ ಬಗೆಯುವವರೂ ಪರಸ್ಪರ ಕ್ಷುಲ್ಲಕ ಕಾರಣಗಳಿಗೆ ಕಚ್ಚಾಡುವವರೂ ಆಗುತ್ತಾರಲ್ಲ ಏಕೆ?" ಎಂಬ ಪ್ರಶ್ನೆ ಸಮಕಾಲೀನ ಭಾರತದಲ್ಲೂ ಬದಲಾಗಿಲ್ಲ. ನಾನ್ ಕೌರಿ ಹಡಗಿನಲ್ಲಿ ಟೇಬಲ್ ಟೆನ್ನಿಸ್ ಆಡುವ ಬೋರ್ಡುಗಳೆಲ್ಲ ಇಸ್ಪೀಟ್ ಆಡುವ ತಾಣಗಳಾಗಿ ಬದಲಾಗಿದ್ದವು. ಇದು ಮೇಲಿನ ಚರ್ಚೆಗೆ ಮತ್ತೊಂದು ಉದಾಹರಣೆಯಾಗಿತ್ತು. ತೇಜಸ್ವಿಯವರು ಎತ್ತಿಕೊಂಡ ಈ ಮೇಲಿನ ಚರ್ಚೆ ಭಾರತದ ಭೂಗೋಳದಿಂದ ಹೊರಬಂದರೂ ಅದರ ಸಾಮಾಜಿಕ ಮನಸ್ಥಿತಿಯಿಂದ ಹೊರಬರಲು ಸಾಧ್ಯವಾಗುತ್ತಿಲ್ಲ ಎಂಬುದನ್ನು ತಿಳಿಸುತ್ತಲೇ ಸಮಗ್ರ ಭಾರತದ ಕಲ್ಪನೆಯೂ ಸೇರಿದಂತೆ ಹಿಂದುಳಿದ ರಾಷ್ಟ್ರಗಳ ವಸ್ತುಸ್ಥಿತಿಯ ಚಿತ್ರಣಗಳನ್ನು ಕೂಡ ಅರ್ಥೈಸಿಕೊಳ್ಳಲು ಬೇಕಾದ ಸಾಧ್ಯತೆಗಳನ್ನು ಒದಗಿಸಿಕೊಡುತ್ತವೆ.

ಸಮುದ್ರದೊಳಗೆ ಏರ್ಪಡುವ ಅಂತರ್ಗಾಮಿ ಪ್ರವಾಹಗಳ ಬಗ್ಗೆ ಲೇಖಕರು ಉಲ್ಲೇಖಿಸುತ್ತಾರೆ. ಭೂ ಪ್ರದೇಶದಲ್ಲಿ ಹವಾಮಾನ ವೈಪರೀತ್ಯ, ಒಣಭೂಮಿಯಲ್ಲೂ ಮಳೆ, ಋತುಮಾನಗಳ ಮೇಲೆ ಪ್ರಭಾವ, ಮೀನಿನ ಕ್ಷಾಮ ಮುಂತಾದ ಅಂಶಗಳು ಈ ಅಂತರ್ಗಾಮಿ ಪ್ರವಾಹಗಳ ಪ್ರಭಾವದಿಂದ ಉಂಟಾಗುತ್ತದೆ ಎಂಬ ವೈಜ್ಞಾನಿಕ ತಿಳುವಳಿಕೆಯನ್ನು ಲೇಖಕರು ವಿವರಿಸುತ್ತಾರೆ. ಸಮುದ್ರ ಪ್ರಯಾಣದ ಏಕತಾನತೆಯ ಬೇಸರದಿಂದ ಹೊರಬರಲು ಸಮುದ್ರದಲ್ಲಿ ಮೀನು ಹಿಡಿಯಲು ಗಾಳವನ್ನು ಬಳಸಿದಾಗ ದಾರ ಒಳಪ್ರವಾಹಕ್ಕೆ ಸಿಲುಕಿ ಚಲಿಸುವ ಅನುಭವವಾಗುವುದನ್ನು ಲೇಖಕರು ಅತ್ಯಂತ ಸೂಕ್ಷ್ಮವಾಗಿ ಬರೆದಿದ್ದಾರೆ. ಲೇಖಕನಿಗೆ ಅದರಲ್ಲೂ ಪ್ರವಾಸಕಥನಗಳನ್ನು ಬರೆಯುವಂಥವರಿಗೆ ತಾವು ನಿಂತ ಭೂಗೋಳದ ಬಗ್ಗೆ ಸೂಕ್ಷ್ಮ ಮತ್ತು ವ್ಯಾಪಕವಾದ ತಿಳುವಳಿಕೆ ಇರಬೇಕು ಎಂಬ ಅಂಶಗಳನ್ನು ತೇಜಸ್ವಿ ಅವರ

ಬರಹದಲ್ಲಿ ಧಾರಾಳವಾಗಿ ಹೆಕ್ಕಿ ತೆಗೆಯಬಹುದು.

ಹಡಗುಯಾನದಲ್ಲಿ ಸಹಪ್ರಯಾಣಿಕನಾಗಿ ಸಿಕ್ಕಿದ ಸರ್ಕಾರಿಯಾ ತಮ್ಮ ಮಗನಿಗೆ ಪ್ಲೂರಸಿ ಎಂಬ ಶ್ವಾಸಕೋಶದಲ್ಲಿ ನೀರು ತುಂಬಿಕೊಳ್ಳುವ ಕಾಯಿಲೆಯನ್ನು ಕುರಿತು ತೇಜಸ್ವಿಯವರ ಮಾತಿಗೆ ಪ್ರತಿಕ್ರಿಯಿಸುತ್ತಾನೆ. ಎಲ್ಲೂ ಗುಣವಾಗದ ಕಾಯಿಲೆ ಅಂಡಮಾನಿನ ಪ್ರಾದೇಶಿಕ ಪರಿಸರದಲ್ಲಿ ಗುಣವಾಗಿದೆ. ಸರ್ಕಾರಿಯಾ ಮಗನ ವಿಚಾರವಾಗಿ ಕೈ ಚೆಲ್ಲಿದ್ದ ಡಾಕ್ಟರುಗಳಿಗಿಂತ ಮಿಗಿಲಾಗಿ ಅಂಡಮಾನಿನ ಪರಿಸರ ಅವನನ್ನು ಬದುಕಿಸಿ ಕೊಟ್ಟ ಕಾರಣ ಅವನ ಮಗ ಭಾರತಕ್ಕೆ ಬರುವುದಿಲ್ಲವೆಂದು ಹೇಳಿ ಅಲ್ಲೇ ಉದ್ಯೋಗವನ್ನು ಕೂಡ ಮಾಡುತ್ತಿದ್ದಾನೆ. ಸರ್ಕಾರಿಯಾ ಕೂಡ ತಮ್ಮೆಲ್ಲಾ ವ್ಯವಹಾರಗಳನ್ನು ಮುಗಿಸಿ ಅಂಡಮಾನಿನಲ್ಲೇ ನೆಲೆಸುವ ಉದ್ದೇಶಗಳನ್ನು ಇಟ್ಟುಕೊಂಡಿದ್ದಾರೆ. ಇದು ತೇಜಸ್ವಿ ಮತ್ತು ಸರ್ಕಾರಿಯಾ ಇಬ್ಬರಲ್ಲೂ ನಡೆದ ಸರಳ ನಿರೂಪಣೆಯ ಸಂಭಾಷಣೆ ಮಾತ್ರವಲ್ಲ. ಸರ್ಕಾರಿಯಾನ ಅನುಭವಗಳ ಹಿಂದೆ ಅತ್ಯಂತ ಸಂವೇದನಾಶೀಲ ಸಾಮಾಜಿಕ ಕೌಟುಂಬಿಕ ಕಥನವಿದೆ. ಅಷ್ಟೇ ಅಲ್ಲದೆ ಪ್ರಾದೇಶಿಕ ಸೂಕ್ಷ್ಮತೆಯ ಭೌಗೋಳಿಕ ಹಿನ್ನೆಲೆಯ ನಿರ್ವಚನವಿದೆ. ತೇಜಸ್ವಿಯವರ ಬರಹಗಳಲ್ಲಿ ಬರುವ ಈ ಬಗೆಯ ಪಾತ್ರಗಳು ಹೀಗೆ ಕಥೆಗಳ ಕಣಜಗಳಂತೆಯೇ ಇರುತ್ತವೆ. ಅಷ್ಟೇ ಅಲ್ಲದೆ ಸ್ಥಳೀಯ ಜ್ಞಾನವನ್ನು ಅನುಭವಿಸಿದ, ಅನುಕರಿಸುವ ಇಲ್ಲವೇ ಅರಿತುಕೊಳ್ಳುವ ಮನಸ್ಥಿತಿ ಉಳ್ಳವರಾಗಿರುತ್ತವೆ. ಆಯಾ ನೆಲದಿಂದ ದಕ್ಕಿದ ಈ ಬಗೆಯ ಪಾತ್ರಗಳನ್ನು ತೇಜಸ್ವಿಯವರು ಅಭ್ಯಾಸ ಮಾಡುವ ಅಥವಾ ಬೆರಗಿನಿಂದ ಕಟ್ಟಿಕೊಡುವ ಕ್ರಮ ಓದುಗರಲ್ಲಿ ಜ್ಞಾನದ ಹರಿವನ್ನು ಖಂಡಿತವಾಗಿಯೂ ವಿಸ್ತರಿಸುತ್ತದೆ. ಇದೇ ಬಗೆಯ ಪಾತ್ರಗಳು ಭಿನ್ನ ಭಿನ್ನ ಆಯಾಮಗಳಲ್ಲಿ "ಅಲೆಮಾರಿಯ ಅಂಡಮಾನ್" ಕೃತಿಯಲ್ಲಿ ಬೇರೆ ಬೇರೆ ನಿರೂಪಣೆಗಳೊಂದಿಗೆ ಹೇರಳವಾಗಿ ದೊರಕುತ್ತವೆ. ಅಂಡಮಾನ್ ತಲುಪಿದ ನಂತರ ಅಲ್ಲಿನ ಪ್ರವಾಸಿತಾಣಗಳಿಗೆ ತೇಜಸ್ವಿಯವರು ಭೇಟಿ ನೀಡದೆ ತಮ್ಮ ಗೆಳೆಯರೊಂದಿಗೆ ಮೀನು ಹಿಡಿಯಲು ಸಮುದ್ರದ ದಂಡೆಗೆ ಹೋಗುತ್ತಿದ್ದುದು ಲೇಖಕರ ಆಸಕ್ತಿಯನ್ನು ತೋರಿಸುತ್ತದೆ.

ತೇಜಸ್ವಿಯವರು ಅಂಡಮಾನನ್ನು ಕುರಿತು ಚಾರಿತ್ರಿಕವಾಗಿ ಯೋಚಿಸಲು ಪೋರ್ಟ್ ಬ್ಲೇರಿನ ಸುತ್ತಮುತ್ತ ಜಪಾನೀಯರ ಆಕ್ರಮಣವಾದ ವಿಚಾರವನ್ನು ಪ್ರಸ್ತಾಪಿಸುತ್ತಾರೆ. ಸಮುದ್ರದ ಕಡೆಯಿಂದ ಬರುವ ವೈರಿ ಹಡಗುಗಳನ್ನು ನಾಶಮಾಡಲು ಸಮುದ್ರದ ದಿಕ್ಕಿಗೆ ಎದುರಾಗಿದ್ದ ಫಿರಂಗಿ ಕೋಟೆಗಳ ಸುತ್ತ ಹುಲ್ಲು ಬೆಳೆದುದನ್ನು ಕಂಡು ಅವುಗಳನ್ನು ಚಾರಿತ್ರಿಕ ಸ್ಮಾರಕಗಳೆಂದು ರಕ್ಷಿಸಬೇಕಿತ್ತು ಎಂಬುದಾಗಿ ತಿಳಿಸುತ್ತಾರೆ. ಈ ವಿಚಾರಕ್ಕೆ ಪೂರಕವಾಗಿ ಅಂಡಮಾನಿನಲ್ಲಿ ಜಪಾನೀಯರು ಆರಂಭಿಸಿದ ವ್ಯವಸಾಯದ ಬಗ್ಗೆಯೂ ಪ್ರಸ್ತಾಪಿಸುತ್ತಾರೆ. ಅಂಡಮಾನನ್ನು ಆಕ್ರಮಿಸಿದ ಜಪಾನೀಯರು ತಮ್ಮ ದೇಶ ದೂರವಿದ್ದ ಕಾರಣ ತಮಗೆ ಅಗತ್ಯವಾದ ವಸ್ತುಗಳನ್ನು ತಾವೇ ಬೆಳೆದುಕೊಳ್ಳುತ್ತಿದ್ದರು ಎಂಬ ವಿಚಾರದ ಮೇಲೆ ಬೆಳಕು ಚೆಲ್ಲುತ್ತಾರೆ. ಈ ಮೇಲಿನ ಅಂಶ ಸಾಮಾನ್ಯವಾದ ಚಾರಿತ್ರಿಕ ಅಂಶವೆಂದು ಕೈ ಬಿಡಲು ಸಾಧ್ಯವಿಲ್ಲ. ಸ್ಮಾರಕವೆಂದರೆ ಅತ್ಯಂತ ಸ್ವಕೇಂದ್ರಿತ ರಾಜಕೀಯ ಪ್ರಣೀತವಾಗುತ್ತಿರುವ ಕಾಲದಲ್ಲಿ

ತೇಜಸ್ವಿಯವರ ನಿಲುವು ಸ್ಮಾರಕಗಳನ್ನು ಕುರಿತು ಎಷ್ಟು ಸ್ಪಷ್ಟವಾಗಿದೆ ಎಂಬುದನ್ನು ಅರಿಯಬಹುದಾಗಿದೆ. ಪೋರ್ಟ್ ಬ್ಲೇರಿನಲ್ಲಿರುವ ಸೆಲ್ಯುಲರ್ ಜೈಲಿಗೆ ತಾವು ಹೋಗದೆ ಮೀನು ಹಿಡಿಯಲು ಹೋಗಿದ್ದು ಬ್ರಿಟಿಷರ ಆಡಳಿತ ಮತ್ತು ಸುರಕ್ಷಿತ ಆಶ್ರಯತಾಣವಾಗಿದ್ದ ರಾಸ್ ಐಲೆಂಡಿಗೆ ಹೋಗುವುದಕ್ಕೆ ನಿರಾಕರಿಸಿದ ಅಂಶಗಳು ತೇಜಸ್ವಿಯವರ ಮನೋಗತವನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಲು ಬೇಕಾದ ಅಂಶಗಳನ್ನು ಒದಗಿಸಿಕೊಡುತ್ತವೆ. ಈ ದೃಷ್ಟಿಯಲ್ಲಿ ಅತ್ಯಂತ ಜನಪ್ರಿಯ ಸ್ಮಾರಕವಾಗಿರುವ ಸೆಲ್ಯುಲರ್ ಜೈಲಿನ ಬಗೆಗಿನ ರಾಜಕೀಯ ಆಯಾಮಗಳನ್ನು ಹಾಗೂ ರಾಸ್ ಐಲೆಂಡಿನ ಸ್ವಯಂಸುಭದ್ರ ಆಡಳಿತಶಾಹಿಯ ಆಯಾಮಗಳನ್ನು ಅತ್ಯಂತ ಸೂಕ್ಷ್ಮವಾಗಿ ಪರಿಶೀಲಿಸಲು "ಅಲೆಮಾರಿಯ ಅಂಡಮಾನ್" ಕೃತಿ ಅತ್ಯಂತ ಮುಖ್ಯವಾದ ಪಠ್ಯವಾಗುತ್ತದೆ.

ಅಂಡಮಾನಿನದ್ದು ತುಂಬಾ ವಿಶೇಷವಾದ ಮತ್ತು ಸೂಕ್ಷ್ಮವಾದ ಭೌಗೋಳಿಕ ಪರಿಸರ. ಈ ಭೌಗೋಳಿಕ ಪರಿಸರದಲ್ಲಿ ಝುರವಾ, ಸೆಂಟಿನೇಲ್ ಮುಂತಾದ ಬುಡಕಟ್ಟು ಕಾಡು ಜನರು ವಾಸ ಮಾಡುತ್ತಿರುವರು. ಅಂಡಮಾನನ್ನು ಅಭಿವೃದ್ಧಿ ಪಡಿಸುವ ಉದ್ದೇಶದಿಂದ ಅಂಡಮಾನಿನ ದ್ವೀಪಗಳೆಲ್ಲವನ್ನು ಸಂಪರ್ಕಿಸುವಂತೆ "ದಿ ಗ್ರೇಟ್ ಅಂಡಮಾನ್ ಟ್ರಂಕ್ ರೋಡ್" ನಿರ್ಮಿಸಲು ಹೊರಟ ವಿಚಾರಗಳನ್ನು ತೇಜಸ್ವಿಯವರು ಪ್ರಸ್ತಾಪಿಸುತ್ತಾರೆ. ಈ ರಸ್ತೆಯನ್ನು ಮಾಡುವ ಬಗೆಗೆ ಝುರವಾ ಕಾಡು ಜನರಿಂದ ಅತ್ಯಂತ ತೀವ್ರ ಪ್ರತಿರೋಧವಿದ್ದು ರಸ್ತೆ ಕೆಲಸ ಮಾಡುವವರಿಗೆ ವಿಷಪೂರಿತವಾದ ಬಾಣಗಳನ್ನು ಬಿಟ್ಟು ಸಾಯಿಸುತ್ತಿದ್ದರು. ಝುರವಾಗಳ ಸಹಜ ಪ್ರತಿಭಟನೆಯನ್ನು ಸಹಿಸಿದ ಆಧುನಿಕತೆಯ ವಕ್ತಾರಿಕೆಯಂತಿದ್ದ ಕಾವಲುಗಾರರು ಝುರವಾಗಳನ್ನು ಗುಂಡಿಕ್ಕಿ ಕೊಲ್ಲುತ್ತಿದ್ದರು. ಈ ಟ್ರಂಕ್ ರಸ್ತೆ ನಿರ್ಮಾಣವಾಗುವವರೆಗೂ ನೂರಾರು ಜನ ಝುರವಾಗಳನ್ನು ಕೊಲ್ಲಲಾಯಿತು. ಅಂಡಮಾನಿನ ಕಾಡುಜನರ ಮೂಲತಾಣವಾಗಿದ್ದ ತಮ್ಮ ನೆಲದ ಬಗೆಗಿನ ಪ್ರೀತಿ ಮತ್ತು ಅವರಲ್ಲಿ ಮೂಡುವ ಅಭದ್ರತೆಗಳಿಗೆ ಆಧುನಿಕತೆಯೆಂಬ ಭಯಾನಕ ಭೂತ ಇಂದಿಗೂ ಕಾಡುತ್ತಿರುವುದನ್ನು ಗಮನಿಸಬಹುದಾಗಿದೆ. ವರ್ತಮಾನದಲ್ಲಿ ಕೆಳವರ್ಗದ ಕಾಡು ಜನರನ್ನು ಹೊರತುಪಡಿಸಿದರೆ ಕೆಲವರು ಈ ಟ್ರಂಕ್ ರಸ್ತೆಯ ಆಗಮನದಿಂದ ಆಧುನೀಕರಣಗೊಂಡು ತಮ್ಮ ಮೂಲಸಂಸ್ಕೃತಿಯನ್ನು ಕಳೆದುಕೊಳ್ಳುತ್ತಿರುವುದು ಮಾಡರ್ನಿಟಿಯ ಅತ್ಯಂತ ಘೋರ ಪರಿಣಾಮವೆಂದೇ ಹೇಳಬಹುದು. ನಿತ್ಯಹರಿದ್ವರ್ಣದ ಉಷ್ಣವಲಯದ ಕಾಡುಗಳು ಮೂಲಸ್ವರೂಪದಲ್ಲಿ ಉಳಿದಿರುವುದು ಅಂಡಮಾನಿನಲ್ಲಿ ಮಾತ್ರ. ಈ ಕಾಡುಗಳನ್ನು ಮತ್ತು ಅಪಾರ ಜನಸಂಪತ್ತಿರುವ ಸಮುದ್ರವನ್ನು ಆಧುನಿಕತೆಗೆ ಒಗ್ಗಿಸಿ ಅಭಿವೃದ್ಧಿಯ ಮುಖವಾಣಿಯಾಗಿಸುತ್ತಿರುವ ಬಗೆಗೆ ತೇಜಸ್ವಿಯವರ ತಕರಾರುಗಳನ್ನು ಕೃತಿಯುದ್ದಕ್ಕೂ ಕಾಣಬಹುದು. ಅಂಡಮಾನಿನ ಅಮೂಲ್ಯ ಸಂಪತ್ತನ್ನು ಉಳಿಸಿಕೊಳ್ಳುವ ಉದ್ದೇಶ ಸರ್ಕಾರಕ್ಕೆ ಇದ್ದರೆ "ನಿಮ್ಮ ಸಾಂಪ್ರದಾಯಿಕ ಅಭಿವೃದ್ಧಿ ಕಲ್ಪನೆಗಳನ್ನು ಅಂಡಮಾನಿನ ಮೇಲೆ ಹೇರಬಾರದು. ಗ್ಯಾಲಪಾಗೋಸ್ ದ್ವೀಪವನ್ನು ಹೇಗೆ ರಕ್ಷಿಸಲಾಗುತ್ತಿದೆಯೋ ಹಾಗೆ

ಇದನ್ನೂ ಸಂರಕ್ಷಿಸಿ ಅರಣ್ಯ ಮತ್ತು ಸಾಗರ ಉತ್ಪನ್ನಗಳ ಆದಾಯ ಇಷ್ಟಕ್ಕೆ ಅಂಡಮಾನಿನ ವಹಿವಾಟುಗಳನ್ನು ಸೀಮಿತಗೊಳಿಸಬೇಕು. ಈ ಸಂಪನ್ಮೂಲಗಳು ಹಾಳಾಗದಂತೆ ಸಂರಕ್ಷಿಸುತ್ತಲೇ ಇವುಗಳಿಂದ ಆದಾಯ ಪಡೆಯುವ ವಿಧಾನಗಳನ್ನು ನಾವು ಕಂಡುಕೊಳ್ಳಬೇಕು.'' ತೇಜಸ್ವಿಯವರು ಕೃಷಿವಿಜ್ಞಾನಿ ಶರ್ಮಾ ಅವರನ್ನು ಅಂಡಮಾನಿನಲ್ಲಿ ಭೇಟಿಯಾದಾಗ ಮಾತನಾಡಿದ ಈ ಸಂಭಾಷಣೆ ಅಂಡಮಾನಿನ ಮೂಲಸ್ವರೂಪದ ಬಗೆಗಿನ ವಿಚಾರಗಳನ್ನು ಕುರಿತಂತೆ ಅತ್ಯಂತ ಮುಖ್ಯವಾದುದು.

ತಾನಿದ್ದಲ್ಲಿಯೇ ಲೋಕದ ಜೊತೆಗೆ, ಸ್ಥಳೀಯತೆಯೊಂದಿಗೆ ಬೆಸೆದುಕೊಳ್ಳಬಹುದಾದ ಸಾಧ್ಯತೆಗಳು ತೇಜಸ್ವಿಯವರ ಬರಹಗಳಿಗಿದೆ. ಅಂಡಮಾನಿನ ಸಮುದ್ರದ ದಡದಲ್ಲಿರುವ ಕಾಡುಗಳನ್ನು ಪಶ್ಚಿಮಘಟ್ಟಗಳ ಕಾಡುಗಳ ಹಾಗೆ ನೋಡಬಲ್ಲ ಪಕ್ಷಿ ಪ್ರೇಮಿ ಸಲೀಮ್ ಅವರು, ಕಂದುಬಣ್ಣದ ಪಾರಿವಾಳ (ಇಂಪೀರಿಯಲ್ ಪಿಜನ್) ಎಂಬುದು ಅಂಡಮಾನಿನ ಕಾಡಿನಲ್ಲಿದೆ ಎನ್ನುವುದನ್ನು ನೆನಪಿಸಿಕೊಂಡು ಅದನ್ನು ಚಿಡಿಯಾಟಾಪಿನ ಕಾಡುಗಳಲ್ಲಿ ಹುಡುಕಲು ಪ್ರಯತ್ನಿಸುತ್ತಾರೆ. ಪಶ್ಚಿಮಘಟ್ಟಗಳಲ್ಲಿ ಹೇರಳವಾಗಿ ಸಿಗುವ ಶಿವನೆ, ಹೊನ್ನೆ, ಸುರಹೊನ್ನೆ, ನೇರಲು, ಸುರಗಿ ಮುಂತಾದ ಮರಗಳನ್ನು ನೆನಪಿಸಿಕೊಂಡು ಚಿಡಿಯಾಟಾಪಿನಲ್ಲಿ ಬೃಹತ್ ಗಾತ್ರದಲ್ಲಿ ಬೆಳೆದಿದ್ದ ಮರಗಳನ್ನು ನೋಡಿ ಬೆರಗಾಗಿದ್ದರ ಬಗ್ಗೆ ಲೇಖಕರು ವಿವರಿಸುತ್ತಾರೆ. ಚಿಡಿಯಾಟಾಪಿನ ಸಮುದ್ರ ದಂಡೆಯಲ್ಲಿ ಮೀನು ಹಿಡಿಯಲು ಪ್ರಯತ್ನಿಸಿ ಅಲ್ಲಿ ಅವರಿಗೆ ನೀಲಿಯ ಮೀನು ಮತ್ತು ಆಕ್ಟೋಪಸ್ ದರ್ಶನವಾದ ಬಗೆಗಿನ ವಿವರವಾದ ವಿಚಾರಗಳನ್ನು ಲೇಖಕರು ಮಂಡಿಸುತ್ತಾರೆ. ಚಿಡಿಯಾಟಾಪಿನ ಸಮುದ್ರದಂಡೆಗೆ ಬಂದು ``ಇಲ್ಲಿಗೇಕೆ ಬಂದೆವು?'' ಅಂದುಕೊಂಡು ಅನಂತರ ಆ ಸ್ಥಳ ಅವರ ಹುಡುಕಾಟಗಳ ಕೇಂದ್ರವಾಗಿದ್ದನ್ನು ಗಮನಿಸಬಹುದು. ಈ ದೃಷ್ಟಿಯಲ್ಲಿ ತೇಜಸ್ವಿಯವರೊಳಗಿದ್ದ ಒಬ್ಬ ಅನ್ವೇಷಕ ನಮಗೆ ಎಲ್ಲ ಕಾಲದ ವರ್ತಮಾನದಲ್ಲಿ ಮುಖಾಮುಖಿಯಾಗುತ್ತಲೇ ಇರುತ್ತಾನೆ.

ವಂಡೂರಿನ ಹವಳದ ದಂಡೆಗಳಲ್ಲಿ ಕೊರಲ್‌ಗಳನ್ನು ಕುರಿತು ವೈಜ್ಞಾನಿಕವಾಗಿ ಮತ್ತು ಪರಿಚಯಾತ್ಮಕವಾಗಿ ಕಟ್ಟಿಕೊಟ್ಟಿರುವುದು ತೇಜಸ್ವಿಯವರ ಬರಹದ ವೈಶಿಷ್ಟ್ಯ . ಹವಳದ ದಂಡೆಗಳು ರೂಪುಗೊಳ್ಳುವ ಬಗೆ, ಅವುಗಳ ಸ್ವರೂಪ, ವಿನ್ಯಾಸ ಮತ್ತು ಕಾರ್ಯ ಇವುಗಳನ್ನು ಕುರಿತು ಅತ್ಯಂತ ಸಶಕ್ತವಾಗಿ ತೇಜಸ್ವಿಯವರು ಸಮುದ್ರದೊಳಗಿನ ಹವಳಗಳನ್ನು ಕುರಿತು ಪರಿಚಯಿಸುತ್ತಾರೆ. ವಂಡೂರು, ರೆಡ್ ಸ್ಕಿನ್ ಮತ್ತು ಜಾಲಿಬಾಯ್ ದ್ವೀಪಗಳಲ್ಲಿ ಹೇರಳವಾಗಿರುವ ಹವಳದ ದಂಡೆಗಳನ್ನು ಕುರಿತು ಲೇಖಕರು ವಿವರಿಸುತ್ತಾರೆ. ಅತ್ಯಂತ ಆಕರ್ಷಕವಾಗಿರುವ ಕೊರಲ್‌ಗಳನ್ನು ಪ್ರವಾಸಿಗರಿಗೆ ಮಾರಾಟ ಮಾಡುವ ವಿಚಾರವಾಗಿ, ಸರ್ಕಾರ ಈ ಮೇಲಿನ ಮೂರು ಪ್ರದೇಶಗಳನ್ನು ರಾಷ್ಟ್ರೀಯ ಉದ್ಯಾನವೆಂದು ಘೋಷಿಸಿದ ಮೇಲೆ ಹವಳದ ದಂಡೆಗಳನ್ನು ಕೀಳುವುದು ಮತ್ತು ಮಾರುವುದು ಕಡಿಮೆಯಾಗಿರಬಹುದು ಎಂದು ಲೇಖಕರು ಅಭಿಪ್ರಾಯ ಪಡುತ್ತಾರೆ. ಸಮುದ್ರದ ನೀರಿನ ಮಟ್ಟ ಕಡಿಮೆಯಾದಾಗ ಅತ್ಯಂತ ಸುಂದರವಾಗಿ ಕಾಣುವ ಕೊರಲ್‌ಗಳು ಹೆಚ್ಚು ವಿಷಪೂರಿತವೂ ಹೌದು

ಎಂಬ ವೈಜ್ಞಾನಿಕ ಮತ್ತು ಜೈವಿಕ ವಿಚಾರಗಳನ್ನು ಲೇಖಕರು ಬರೆಯುತ್ತಾರೆ. ಅವುಗಳ ಸ್ವಾಭಾವಿಕ ಗುಣಗಳನ್ನು ವಿವರಿಸುತ್ತಾ ಕೋರಲ್ ಒಂದನ್ನು ಕದ್ದುತಂದು ಇಟ್ಟುಕೊಂಡಾಗ, ಅವು ಹೊರಸೂಸುತ್ತಿದ್ದ ವಾಸನೆಯನ್ನು ಕುರಿತು ಲೇಖಕರು ಪ್ರಸ್ತಾಪಿಸುತ್ತಾರೆ. ಕೋರಲ್‌ಗಳ ಹಲವು ಬಗೆಗಳನ್ನು ಕೂಡ ತೇಜಸ್ವಿಯವರು "ವಂಡೂರಿನ ಹವಳದ ದಂಡೆಗಳು" ಎಂಬ ಭಾಗದಲ್ಲಿ ಪರಿಣಾಮಕಾರಿಯಾಗಿ ವಿವರಿಸಿದ್ದಾರೆ. ಸ್ಪೈನಿ ಕೋರಲ್‌ಗಳು ಮುಳ್ಳಿನ ಉಂಡೆಗಳಂತೆ ಇರುತ್ತವೆ. ಅದರ ಮೇಲೆ ಕಾಲಿಟ್ಟರೆ ಚರ್ಮವೇ ಕಿತ್ತು ಬರುತ್ತದೆ. ಇಂತಹ ಕೋರಲ್ ಮೇಲೆ ಲೇಖಕರು ಕಾನ್ಪುರದ ಚಪ್ಪಲಿ ಧರಿಸಿ ಕಾಲಿಟ್ಟಾಗ ಚಪ್ಪಲಿ ಕಿತ್ತು ಬಂದದ್ದನ್ನು ಬರೆಯುತ್ತಾರೆ. ಅತ್ಯಂತ ಗಟ್ಟಿಮುಟ್ಟಾದ ಕಾನ್ಪುರದ ಚಪ್ಪಲಿಯ ವಿಶೇಷತೆ ಮತ್ತು ವಂಡೂರಿನ ಹವಳದ ದಂಡೆ ಎರಡನ್ನೂ ಭೌಗೋಳಿಕ, ಜೈವಿಕ ಮತ್ತು ಸಾಮಾಜಿಕವಾಗಿ ಗ್ರಹಿಸಲು ಬೇಕಾದ ಆಯಾಮಗಳು 'ಅಲೆಮಾರಿಯ ಅಂಡಮಾನ್' ಕೃತಿಯಲ್ಲಿವೆ. ಪೆಸಿಫಿಕ್ ಮಹಾಸಾಗರದಲ್ಲಿರುವ ಕೋರಲ್‌ಗಳು ಮತ್ತು ಅಟಾಲ್ ಗಳ ಬಗ್ಗೆ ಲೇಖಕರು ವಿವರಿಸುತ್ತಾ ಬ್ಯಾರಿಯರ್ ಗಳೆಂದರೇನು, ರೀಫ್ ಗಳೆಂದರೇನು ಎಂಬುದನ್ನು ಜಾಗತಿಕ ಭೌಗೋಳಿಕತೆಯ ಬಗ್ಗೆ ಬೇಕಾದ ಪಠ್ಯಗಳನ್ನು ಕೂಡ ಒದಗಿಸುತ್ತಾರೆ. ಒಟ್ಟಾರೆಯಾಗಿ ಅಂಡಮಾನಿಗರು ವಂಡೂರಿನಲ್ಲಿರುವ ಹವಳದ ದಂಡೆಗಳನ್ನು ಯಾವ ವರ್ಗಕ್ಕೆ ಸೇರಿಸಬಹುದು ಎಂಬ ಯೋಚನೆಯೂ ಮಾಡದಿದ್ದಾಗ ತೇಜಸ್ವಿಯವರ ಅಧ್ಯಯನ ಮತ್ತು ಗ್ರಹಿಕೆಯ ಫಲವಾಗಿ ವಂಡೂರಿನ ಹವಳದ ದಂಡೆಗಳನ್ನು ಫ್ರಿಂಜಿಂಗ್ ರೀಫ್ ವರ್ಗಕ್ಕೆ ಸೇರಿಸಬಹುದು ಎಂಬ ಸಂಶೋಧನಾತ್ಮಕ ಅಭಿಪ್ರಾಯವನ್ನು ನೀಡುತ್ತಾರೆ. ಸದಾ ತನ್ನ ಕಾಲದ ಅನ್ವೇಷಣೆಗಳಿಗೆ ಮತ್ತು ಸಾಮಾಜಿಕ ವೈಜ್ಞಾನಿಕ ವಿಚಾರಗಳಿಗೆ ತೇಜಸ್ವಿಯವರ ಬರಹಗಳು ವರ್ತಮಾನವಾಗುತ್ತಲೇ ಇರುತ್ತವೆ.

ಮಾಯಾಬಂದರನ್ನು ಕುರಿತು ಮತ್ತು ಸ್ಥಳೀಯ ಸಮುದ್ರಯಾನವನ್ನು ಕುರಿತು ಬರೆಯುವಾಗ ಲೇಖಕರು ಹಡಗಿನ ಪುಟ್ಟ ಕೋಣೆಯೊಂದರಲ್ಲಿ ಅತ್ಯಂತ ಹೆಚ್ಚು ಅಲಂಕಾರ ಮಾಡಿಕೊಂಡು ಕುಳಿತಿದ್ದ ಹೆಣ್ಣೊಬ್ಬಳನ್ನು ಕಂಡು ಪಶ್ಚಿಮಘಟ್ಟಗಳಲ್ಲಿ ಸಾಲಾಗಿ ನಿಂತಿರುವ ಹೈವೇ ಗರ್ಲ್ಸ್ ವಿಚಾರವನ್ನು ಮಂಡಿಸುತ್ತಲೇ ಹೆಣ್ಣು, ಆದಾಯ, ಸಮಾಜ ಮತ್ತು ನಾಗರಿಕತೆ ಮುಂತಾದ ಅಂಶಗಳನ್ನು ಹೆದ್ದಾರಿ ಸಂಸ್ಕೃತಿ ಹೊಸರೂಪದ ಬಗ್ಗೆ ಚರ್ಚಿಸುತ್ತಾರೆ. ಹೆದ್ದಾರಿ ಹುಡುಗಿ ಮತ್ತು ವಾಟರ್ ವೇ ಹುಡುಗಿ ಇಬ್ಬರ ಬಗೆಗೂ ಚಿಂತಿಸುತ್ತಾ, ಅವರು ಎದುರಾಗುತ್ತಿರುವ ಮತ್ತು ಸಮಾಜದ ಕರಾಳತೆ ಅವರೊಳಗೆ ಸೇರುತ್ತಿರುವ ಸೂಕ್ಷ್ಮ ನೆಲೆಗಟ್ಟನ್ನು ಲೇಖಕರು ಭಿನ್ನ ನೆಲೆಗಳಲ್ಲಿ ಗ್ರಹಿಸಲು ಸಾಧ್ಯವೆಂಬಂತೆ ಬರೆಯುತ್ತಾರೆ.

ಜಾತಿ ಕೋಮುಗಳಿಲ್ಲದ, ಭಾಷಾ ಭೇದಗಳಿರದ ವಿಭಿನ್ನ ಸಂಸ್ಕೃತಿಯು ಸಾಮಾಜಿಕ ಪರಿಸರ ಅಂಡಮಾನಿನ ನೆಲದಲ್ಲಿದೆ. ಚರ್ಚು, ಮಸೀದಿ, ದೇವಾಲಯಗಳು ಹುಡುಕಿದರೆ ಅಲ್ಲಲ್ಲಿ ಮಾತ್ರ ಕಾಣಬಹುದು. ಭಾರತದಲ್ಲಿ ಜಾತ್ಯತೀತತೆಯನ್ನು ಉಳಿಸಿಕೊಂಡ ಮತ್ತು ಅದನ್ನು ಆಚರಿಸುತ್ತಿರುವ ಏಕೈಕ ಭೂಭಾಗವೆಂದರೆ

ಅಂಡಮಾನ್ ಎಂದು ಲೇಖಕರು ವಿವರಿಸುತ್ತಾರೆ. ಅಂಡಮಾನಿನಲ್ಲಿ ಮದುವೆಯಾಗಲು ಗಂಡು ಹೆಣ್ಣಿನ ಜಾತಕ ನೋಡುವ ಅಭ್ಯಾಸವಿಲ್ಲ. ಯಾರು ಯಾವ ಮತಕ್ಕಾದರೂ ಸೇರಬಹುದು. ಗುರ್ಖಾ ಧರಿಸಿದ ಹೆಂಗಸರು ಕಾಣುವುದೇ ಇಲ್ಲ. ಕುಲ ಗೋತ್ರಗಳನ್ನು ಹುಡುಕಿಕೊಂಡು ಅಂಡಮಾನಿನ ಜನರು ಸಂಬಂಧ ಬೆಳೆಸುವುದೇ ಇಲ್ಲ. ಇಷ್ಟೇ ಅಲ್ಲದೆ ರಾಜಕೀಯ ದೃಷ್ಟಿಯಿಂದ ಅಂಡಮಾನ್ ಕೇಂದ್ರಾಡಳಿತ ಪ್ರದೇಶವಾಗಿರುವುದರಿಂದ ಅಲ್ಲಿ ಕೋಮು, ಮತೀಯತೆ ಮುಂತಾದ ಲಾಲಸೆಗಳನ್ನು ತೋರಿಸಿ ವೋಟು ಗಿಟ್ಟಿಸಬೇಕಾದ ಅನಿವಾರ್ಯತೆ ಇಲ್ಲವಾದುದರಿಂದ ಅಂಡಮಾನ್ ನಿಜದ ಅರ್ಥದಲ್ಲಿ ಒಂದು ಜಾತ್ಯತೀತವಾದ ಭೂಪ್ರದೇಶವಾಗಿದೆ. ಅಂಡಮಾನಿನಲ್ಲಿ ಶಿಕ್ಷಣಕ್ಕೆ ಅತ್ಯುತ್ತಮವಾದ ವಾತಾವರಣವಿದ್ದು, ಶೈಕ್ಷಣಿಕ ದೃಷ್ಟಿಯಿಂದಲೂ ಒಂದು ಮಾದರಿ ಭೂಭಾಗವಾಗಬಹುದು ಎಂಬ ನಿಲುವನ್ನು ತೇಜಸ್ವಿಯವರು ತಳೆಯುತ್ತಾರೆ. ಅಂಡಮಾನಿನ ಸಾಮಾಜಿಕ ರಾಜಕೀಯ ಮತ್ತು ಸಾಂಸ್ಕೃತಿಕ ಪರಿಸರ ಭಾರತದಂತಹ ಜಾತ್ಯತೀತ ರಾಷ್ಟ್ರದಲ್ಲಿ ಅತ್ಯಂತ ಮಾದರಿಯೂ ಮತ್ತು ಅನುಸರಣೀಯವಾದುದು ಎಂಬ ವಿಸ್ತಾರವುಳ್ಳ ಪರಿಜ್ಞಾನ ತೇಜಸ್ವಿಯವರ 'ಅಲೆಮಾರಿಯ ಅಂಡಮಾನ್ ಮತ್ತು ಮಹಾನದಿ ನೈಲ್' ಕೃತಿಯ ಆಶಯವಾಗಿಯೂ ಕಾಣುತ್ತದೆ.

ಪರಾಮರ್ಶನ ಗ್ರಂಥಗಳು:

1. ಪೂರ್ಣಚಂದ್ರ ತೇಜಸ್ವಿ, (1993), ಲೆಮಾರಿ ಅಂಡಮಾನ್ ಮತ್ತು ಮಹಾನದಿ ನೈಲ್, ಮೈಸೂರು: ಪುಸ್ತಕ ಪ್ರಕಾಶನ.
2. ಸಂಗನಾಳಮಠ ಯು.ಎನ್. (ಸಂ.), (2009), ಕಾಡಿನ ಸಂತ ಪೂರ್ಣಚಂದ್ರ ತೇಜಸ್ವಿ, ಬೆಂಗಳೂರು: ಸಿ.ವಿ.ಜಿ. ಇಂಡಿಯಾ.
3. ನರೇಂದ್ರ ರೈ ದೇರ್ಲ, (2015), ಪೂರ್ಣಚಂದ್ರ ತೇಜಸ್ವಿ, ಬೆಂಗಳೂರು: ಮಸ್ತಕಮನೆ.
4. ಶಿವಾರೆಡ್ಡಿ ಕೆ.ಸಿ., (2010), ಕೆ.ಪಿ. ಪೂರ್ಣಚಂದ್ರ ತೇಜಸ್ವಿ: ಬದುಕು ಬರಹ, ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ.

Funding:

This study was not funded by any grant.

Conflict of interest:

The Authors have no conflict of interest to declare that they are relevant to the content of this article.

About the License:

© The Authors 2024. The text of this article is open access and licensed under a Creative Commons Attribution 4.0 International License.